ಓ ಎಸ್ ನಂ. 24/2015

ಡಿ ಡಬ್ಲ್ಯು 1

ದಿನಾಂಕ 09-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಪಿ ಆರ್ ಸಿ ವಕೀಲರಿಂದಃ

ಪ್ರಸ್ತುತ ದಾವೆಯಲ್ಲಿ ನಾನು ಪಕ್ಷಗಾರಳಾಗಿರುತ್ತೇನೆ ಎಂದರೆ ಸರಿ. ಕೃಷ್ಣಪ್ಪರವರು ಬಿಟ್ಟು ಹೋಗಿರುವ ಆಸ್ತಿಗಳಲ್ಲಿ ವಾದಿಗಳು, ಪ್ರತಿವಾದಿಗಳಿಗೆ ಎಲ್ಲಾರಿಗೂ ಸಮಾನಾದ ಪಾಲು ಬೇಕೆಂದು ವಾದಿಗಳು ದಾವೆ ಹೂಡಿರುತ್ತಾರೆ ಎಂದರೆ ಸುಳ್ಳು. ಕೃಷ್ಣಪ್ಪರವರು 1999 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ದಾವಾ ಎ ಷೆಡೂಲ್ ಐಟಂ ನಂ.1 ರ ಸರ್ವೆ ನಂ.5 ರ 4 ಎಕರೆ 35 ಗುಂಟೆ ಜಮೀನು ನಾವು ವಿಭಾಗ ಮಾಡಿಕೊಳ್ಳುವ ಪೂರ್ವದಲ್ಲಿ ಕೃಷ್ಣಪ್ಪರವರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಸದರಿ ಸ್ವತು್ತ ದಾಸಪ್ಪನವರ ಹೆಸರಿನಲ್ಲಿದ್ದು ಅವರಿಂದ ಕೃಷ್ಣಪ್ಪರವರ ಹೆಸರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಸಪ್ಪರವರು ಕೃಷ್ಣಪ್ಪರವರ ತಂದೆ ಎಂದರೆ ಸರಿ. ಅದೇರೀತಿ ದಾವಾ ಎ ಷೆಡೂಲ್ ಐಟಂ ನಂ.2 ರ ಸರ್ವೆ ನಂ.6 ರ 4 ಎಕರೆ 37 ಗುಂಟೆ ಜಮೀನು ಸಹ ಮೊದಲು ದಾಸಪ್ಪರವರ ಹೆಸರಿನಲ್ಲಿದ್ದು ನಂತರ ಕೃಷ್ಣಪ್ಪರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಅದೇರೀತಿ ದಾವಾ ಎ ಷೆಡೂಲ್ ಐಟಂ ನಂ.3 ರ ಸರ್ವೆ ನಂ.45 ರ 1 ಎಕರೆ 29 ಗುಂಟೆ ಜಮೀನು

ಸಹ ಮೊದಲು ದಾಸಪ್ಪರವರ ಹೆಸರಿನಲ್ಲಿದ್ದು ನಂತರ ಕೃಷ್ಣಪ್ಪರವರ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಆ ಸ್ವತ್ತನ್ನು ಕೃಷ್ಣಪ್ಪರವರು ಇದ್ದಾಗಲೇ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ.45 ರ ಆಸ್ತಿಯನ್ನು ಕೃಷ್ಣಪ್ಪರವರು ಬದುಕಿದ್ದಾಗಲೇ ಅವರ ಮೊದಲನೇ ಹೆಂಡತಿ ಮತ್ತು ಎರಡನೇ ಹೆಂಡತಿಯ ಮಕ್ಕಳ ನಡುವೆ ವಿಭಾಗ ಮಾಡಿದ್ದು ಆ ಆಸ್ತಿ ಸದರಿ ಕೃಷ್ಣಪ್ಪ ರವರ ಮೊದಲನೇ ಹೆಂಡತಿಯ ಮಗನಾದ ಚಂದ್ರಪ್ಪ ರವರ ಹಿಸ್ಸೆಗೆ ಬಂದಿದ್ದು ಸದರಿ ಆಸ್ತಿಯನ್ನು ಕೃಷ್ಣಪ್ಪ ಮತ್ತು ಚಂದ್ರಪ್ಪರವರು ಇಬ್ಬರು ಸೇರಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಎ ಷೆಡೂಲ್ ಐಟಂ ನಂ.5 ರ ಸರ್ವೆ ನಂ.60 ರ 4 ಎಕರೆ 20 ಗುಂಟೆ ಜಮೀನು ಸಹ ಮೊದಲು ಕೃಷ್ಣಪ್ಪರವರ ಹೆಸರಿನಲ್ಲಿದ್ದು ನಂತರ ನಮ್ಮ ಹೆಸರಿಗೆ ಬಂದಿರುತ್ತದೆ ಎಂದರೆ ಸುಳ್ಳು. ಸದರಿ ಜಮೀನು ಈಗ ಚಂದ್ರಪ್ಪರವರ ಭಾಗಕ್ಕೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಎ ಷೆಡೂಲ್ ಐಟಂ ನಂ.6 ರ ಸರ್ವೆ ನಂ.68 ರ 4 ಎಕರೆ 14 ಗುಂಟೆ ಜಮೀನು ಸಹ ಮೊದಲು ಕೃಷ್ಣಪ್ಪರವರ ಹೆಸರಿನಲ್ಲಿದ್ದು ನಂತರ ನಮ್ಮ ಹೆಸರಿಗೆ ಬಂದಿರುತ್ತದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಆ ಸ್ವತ್ತು ನನ್ನ ಮಾವನಾದ ತಿಮ್ಮರಾಯಪ್ಪ ಅಥವಾ ಚಂದ್ರಪ್ಪರವರಿಗೆ ಹೋಗಿರಬಹುದು ನಮಗೆ ಬಂದಿಲ್ಲ ಎಂದು ನುಡಿಯುತ್ತಾರೆ. ಸದರಿ

ಸರ್ವೆ ನಂ.68ರ ಆಸ್ತಿಯನ್ನು 2006ರ ವಿಭಾಗ ಪತ್ರದಲ್ಲಿ ತೋರಿಸಲಾಗಿದೆ ಎಂದರೆ ಸರಿ. ಸರ್ವೆ ನಂ.82ರ 3 ಎಕರೆ 14 ಗುಂಟೆ ಜಮೀನು ಸಹ ಕೃಷ್ಣಪ್ಪರವರ ಹೆಸರಿನಲ್ಲಿದ್ದು ಅದನ್ನು ನಾವು ನಂತರದಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸ್ವತ್ತು 4 ತಲೆಮಾರುಗಳಿಂದ ಬಂದಿರುತ್ತದೆ, ದಾಸಪ್ಪರವರ ಹೆಸರಿನಿಂದ ಕೃಷ್ಣಪ್ಪರವರ ಹೆಸರಿಗೆ ಬಂದಿದ್ದು ನಂತರ ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸರ್ವೆ ನಂ.92ರ 2 ಎಕರೆ 32 ಗುಂಟೆ ಜಮೀನು ಕೃಷ್ಣಪ್ಪರವರ ಮೊದಲನೇ ಹೆಂಡತಿ ಮಗನಾದ ಚಂದ್ರಪ್ಪರವರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.83ರ 2 ಎಕರೆ 25 ಗುಂಟೆ ಜಮೀನನ್ನು ಕೃಷ್ಣಪ್ಪರವರ ಹೆಣ್ಣು ಮಕ್ಕಳನ್ನು ಬಿಟ್ಟು ಅವರ ಗಂಡು ಮಕ್ಕಳು ಮಾತ್ರ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ನನ್ನ ಅಜ್ಜನೇ ಅದನ್ನು ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜ ವಿಭಾಗ ಮಾಡಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಸರ್ವೆ ನಂ.72ರ 1 ಎಕರೆ 32 ಗುಂಟೆ ಜಮೀನು ಸಹ ಕೃಷ್ಣಪ್ಪರವರಿಂದ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ಭಾಗಕ್ಕೆ ಬಂದ ಸರ್ವೆ ನಂಬರುಗಳ ಬಗ್ಗೆ

ಕೇಳಿದರೆ ನಾನು ಹೇಳುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ.73/ ಪಿ ರಲ್ಲಿ ಒಟ್ಟು 38 ಗುಂಟೆ ಜಮೀನನ್ನು ಸಹ ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ  ಸಾಕ್ಷಿ ಇಲ್ಲ ನನ್ನ ಭಾಗಕ್ಕೆ ಸರ್ವೆ ನಂ. 5, 6, 83, 84 ಬಂದಿರುತ್ತದೆ ಎಂದು ನುಡಿಯುತ್ತಾರೆ. ಕಡೂರಿನಲ್ಲಿರುವ ಎರಡು ನಿವೇಶನಗಳನ್ನು ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸುಳ್ಳು. ಸದರಿ ನಿವೇಶನಗಳಲ್ಲಿ ಮನೆ ಕಟ್ಟಿಕೊಂಡು ಬಾಡಿಗೆಯನ್ನು ಸಹ ನಾನು ಪಡೆಯುತ್ತಿದ್ದೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಹೊಟ್ಟೆ ಪಾಡಿಗಾಗಿ ನಾನು ಹೋಟೇಲ್ ನಡೆಸುತ್ತಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಹೋಟೇಲ್ ನಡೆಸುತ್ತಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.  ಸದರಿ ನಿವೇಶನಗಳಲ್ಲಿ ಭವಾನಿ ಮಿಲ್ಟ್ರಿ ಹೋಟೇಲ್ ಎಂಬ ಹೆಸರಿನಲ್ಲಿ ಹೋಟೇಲ್ ನಡೆಯುತ್ತಿದೆ ಎಂದರೆ ಸಾಕ್ಷಿ ನಾನೇ ಆ ಹೆಸರಿನಲ್ಲಿ ಹೋಟೇಲ್ ನಡೆಸುತ್ತಿದ್ದೇನೆ ಎಂದು ನುಡಿಯುತ್ತಾರೆ. ಪಕ್ಕದಲ್ಲಿರುವ 20 x 30 ಅಡಿ ವಿಸ್ತೀರ್ಣದ ನಿವೇಶನದಲ್ಲಿ ಎರಡು ಮಹಡಿ ಕಟ್ಟಡವನ್ನು ನಿರ್ಮಾಣ ಮಾಡಿ ಬಾಡಿಗೆಯನ್ನು ಸಹ ನಾನೇ ಪಡೆಯುತ್ತಿದ್ದೇನೆ ಎಂದರೆ ಸುಳ್ಳು. ಸದರಿ ನಿವೇಶನವನ್ನು ನಾನು ಮಾರಾಟ ಮಾಡಿದ್ದು ಅದರ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸುಳ್ಳು. ದಾವಾ ಆಸ್ತಿಗಳೆಲ್ಲವನ್ನು ಕೃಷ್ಣಪ್ಪರವರ ಗಂಡು ಮಕ್ಕಳು ಮಾತ್ರ ವಿಭಾಗ

ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮದ್ಯಾಹ್ನ 2.45 ಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.

ಓ ಎಸ್ ನಂ. 24/2015
ಡಿ ಡಬ್ಲ್ಯು 1
ದಿನಾಂಕ 09-09-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಪಿ ಆರ್ ಸಿ ವಕೀಲರಿಂದಃ

ಕೃಷ್ಣಪ್ಪರವರ ಮೊದಲನೇ ಹೆಂಡತಿಯ ಮಗನಾದ ಚಂದ್ರಪ್ಪರವರು ಈಗಾಗಲೇ 12 ಕ್ಕಿಂತ ಹೆಚ್ಚು ಎಕರೆಗಳಷ್ಟು ಜಮೀನನ್ನು ಪಡೆದಿದ್ದರೂ ಸಹ ಹೆಣ್ಣುಮಕ್ಕಳಾದ ವಾದಿಗಳ ಹಿಸ್ಸೆಯನ್ನು ಕಸೆಯುವ ಸಲುವಾಗಿ 2006 ರಲ್ಲಿ ನಮ್ಮ ಜತೆ ಷರೀಕ್ಕಾಗಿ ಪುನಃ ಭಾಗ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರಸ್ತುತ

ನಾನು ದಾವಾ ಸಿ ಶೆಡ್ಯೂಲ್ ಮನೆಯಲ್ಲಿ ವಾಸ ಇದ್ದೇನೆ ಎಂದರೆ ಸಾಕ್ಷಿ ಮನೆ ಬಿದ್ದು ಹೋಗಿದ್ದು, ನಾನು ಸಾಲ ಸೋಳ ಮಾಡಿ ಮನೆ ಕಟ್ಟಿಕೊಂಡು ವಾಸ ಇದ್ದೇನೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ವಾದಪತ್ರದ ಶೆಡ್ಯೂಲ್ ನಲ್ಲಿ ನಮೂದಿಸಿರುವ ಸಿ ಶೆಡ್ಯೂಲನ್ನು ಪರಿಶೀಲಿಸಲಾಗಿ ಅದರಲ್ಲಿ ನಮೂದಿಸಿರುವ ಸ್ವತ್ತನ್ನು ಗುರುತಿಸುವ ಬಗ್ಗೆ ಯಾವುದೇ ನಿರ್ದಿಷ್ಟ ನಮೂದುಗಳು ಇಲ್ಲದೆ ಇರುವುದನ್ನು ಗಮನಿಸಲಾಗಿದೆ.)

ಪ್ರಸ್ತುತ ದಾವೆ 2015 ರಿಂದಲೂ ಚಾಲ್ತಿಯಲ್ಲಿದ್ದು ಆದಾಗ್ಯೂ ನಾನು ವಾದಿಗಳ ಹಕ್ಕನ್ನು ಕಸೆಯುವ ಉದ್ದೇಶದಿಂದ ಕಾನೂನುಬಾಹಿರವಾಗಿ ಮನೆ ಕಟ್ಟಿಕೊಂಡು ಇರುತ್ತೇನೆ ಎಂದರೆ ಸರಿಯಲ್ಲ. ದಾವಾ ಎ ಮತ್ತು ಸಿ ಶೆಡ್ಯೂಲ್ ಸ್ವತ್ತುಗಳಿಂದ ನಾನು ಮಾಸಿಕ 2 ಲಕ್ಷ ರೂ ಬಾಡಿಗೆ ಪಡೆಯುತ್ತಿದ್ದೇನೆ ಎಂದರೆ ಸುಳ್ಳು. ನಾನು ಪಡೆದಿರುವಂತಹ ಬಾಡಿಗೆ ಹಣವನ್ನು ವಾದಿಗಳಿಗೂ ಸಹ ಭಾಗ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಗಳ ಹಾಗೂ ನಮ್ಮ ಒಟ್ಟು ಕುಟುಬಂದ ಸ್ವತ್ತುಗಳಾಗಿದ್ದರೂ ಸಹ ವಾದಿಗಳಿಗೆ ಮೋಸ ಮಾಡಿ ಅದರಿಂದ ಬಂದಂತಹ ಉತ್ಪತ್ತಿಯನ್ನು ನಾನು ಬಳಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಕೃಷ್ಣಪ್ಪರವರ ಹೆಣ್ಣು ಮತ್ತು ಗಂಡು ಮಕ್ಕಳಿಗೂ ಸಮಾನ ಹಕ್ಕಿದ್ದರೂ ಸಹ ನಾವು ವಾದಿಗಳಿಗೆ ದಾವೆ ಹೂಡದಂತೆ ಜಗಳ ಮಾಡಿರುತ್ತೇವೆ ಎಂದರೆ ಸುಳ್ಳು.

ಕೃಷ್ಣಪ್ಪರವರ ಮೊದಲನೇ ಹೆಂಡತಿಯ ಮಗನಾದ ಚಂದ್ರಪ್ಪರವರನ್ನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಹಾಜರುಪಡಿಸದೇ ನಾನೇ ಸ್ವತಃ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ಸ್ವತ್ತುಗಳನ್ನು ಖರೀದಿಸಿರುವವರನ್ನು ಸಹ ಪಕ್ಷಗಾರರನ್ನಾಗಿ ಮಾಡಿದ್ದರೂ ಸಹ ದಾಖಲೆಗಳಿಗೆ ವಿರುದ್ಧವಾಗಿ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.